3. <u>ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು:</u> ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>1965ರ ಕರ್ನಾಟಕ ಜಲಸಂಪನ್ಮೂಲ ಅಧಿನಿಯಮ 71(4)ರ ಪ್ರಕರಣದ ಮೇರೆಗೆ:</u>

1. 1965ರ ಕರ್ನಾಟಕ ನೀರಾವರಿ ಅಧಿನಿಯಮದ (1965ರ ಕರ್ನಾಟಕ ಅಧಿನಿಯಮ 16) ನಿಯಮಾವಳಿಗಳ ರೀತ್ಯಾ ಕರ್ನಾಟಕ ಸರ್ಕಾರವು 'ಚಂದ್ರಪಳ್ಳಿ' ನೀರಾವರಿ ಯೋಜನೆಯನ್ನು ನೀರು ಬಳಕೆದಾರರ ವಿತರಣಾ ಮಟ್ಟದ ಮಹಾಮಂಡಳಿಯ ಸಂಬಂಧಿತ ಉಪಬಂಧಗಳು ಅನ್ವಯಿಸುವುದಕ್ಕೆ ವಿನಾಯಿತಿ ನೀಡಿ ದಿನಾಂಕ:09.09.2008ರಂದು ಹೊರಡಿಸಲಾದ ಡಬ್ಲ್ಯೂಆರ್‌ಡಿ/16/ಸಿಎಎಂ/2008ನೇ ಸಂಖ್ಯೆಯ ಅಧಿಸೂಚನೆ.

<u>1980ರ ಕರ್ನಾಟಕ ಜಲಾನಯನ ಪ್ರದೇಶ ಅಭಿವೃದ್ಧಿ ಅಧಿನಿಯಮ 46(3)ರ ಪ್ರಕರಣದ ಮೇರೆಗೆ:</u>

2. 1980ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿ ದಿನಾಂಕ:30.10.2004 ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಡಬ್ಲ್ಯೂಆರ್‌ಡಿ/6/ಸಿಎಎಂ/2004ರ ಕ್ರ.ಸಂ.5ರಲ್ಲಿನ ಕಲಂ(3)ರಲ್ಲಿರುವ 'ಗಾಯತ್ರಿ' ಎಂಬ ಪದದ ನಂತರ 'ಭೀಮ ಸಮುದ್ರ ಟ್ಯಾಂಕ್' ಎಂಬ ಪದಗಳನ್ನು ಸೇರ್ಪಡೆಗೊಳಿಸಿ ದಿನಾಂಕ: 01.12.2008 ರಂದು ಹೊರಡಿಸಲಾದ ಡಬ್ಲ್ಯೂಆರ್‌ಡಿ/14/ಸಿಎಬಿ/2007ನೇ ಸಂಖ್ಯೆಯ ಅಧಿಸೂಚನೆಗಳು

4. <u>ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>2000ರ ಮಾಹಿತಿ ತಂತ್ರಜ್ಞಾನ ಆಯ್ದೆ 90(3)ರ ಪ್ರಕರಣದ ಮೇರೆಗೆ:</u>

2000ರ ಕರ್ನಾಟಕ ಮಾಹಿತಿ ತಂತ್ರಜ್ಞಾನ (2000ರ ಕೇಂದ್ರ ಕಾಯ್ದೆ 21) ಅಧಿನಿಯಮದ ಕಲಂ 90ರ ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ (ಕರ್ನಾಟಕ) ನಿಯಮಾವಳಿಗಳನ್ನು ರಚಿಸಿ ದಿನಾಂಕ:05.08.2004ರಂದು ಹೊರಡಿಸಲಾದ ಐಟಿಡಿ/07/ಪಿಆರ್‌ಎಂ/2004ನೇ ಸಂಖ್ಯೆಯ ಅಧಿಸೂಚನೆ

5. <u>ಡಾ.ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿ):</u> ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

<u>ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ 1951ರ ಕಲಂ 37 (6) (7)ರ ಪ್ರಕಾರ:</u>

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ(ಆಡಿಟ್).

1956ರ ಕಂಪನಿಗಳ ಅಧಿನಿಯಮದ 619 (ಎ) (2)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ 37ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1956 ಕಂಪನಿಗಳ ಅಧಿನಿಯಮದ 619 (4)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2007–08ನೇ ಸಾಲಿನ 30ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 2007–08ನೇ ಸಾಲಿನ 35ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕರಣ 12(6)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಲೋಕಾಯುಕ್ತ ಸಂಸ್ಥೆಯ 2006–07ನೇ ಸಾಲಿನ 21ನೇ ವಾರ್ಷಿಕ ವರದಿ.

6. ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು): ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 ಮತ್ತು 49ನೇ ಪ್ರಕರಣದ ಮೇರೆಗೆ:

1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು 2007–08ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2007–08 ಸಾಲಿನ ವಾರ್ಷಿಕ ವರದಿ.

1985ರ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 13ರ ಪ್ರಕರಣದ ಮೇರೆಗೆ:

1. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2007–08ನೇ ಸಾಲಿನ ವಾರ್ಷಿಕ ವರದಿ.